Ex No. 27/2018

ಪಿಡಬ್ಲ್ಯು-1

**(ದಿನಾಂಕ 15.06.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಮುಖ್ಯ ವಿಚಾರಣೆ 3 ನೇ ತಕರಾರು ಪಕ್ಷಗಾರರ (3rd party objector) ಪರ ಶ್ರೀ ಕೆ ಎಂ ಆರ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ.

ದಿನಾಂಕ 28.10.2014 ರ ನೋಂದಾಯಿತ ಪಾಲು ವಿಭಾಗದ ದಸ್ತವೇಜನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 1 ಎಂದು, ಸರ್ವೆ ನಂಬರ 174/ಬಿ 2 ಗೆ ಸಂಬಂಧಪಟ್ಟ 9 ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 2 ರಿಂದ ನಿ ಪಿ 10 ಎಂದು, ದಿನಾಂಕ 18.02.2014 ರ ನೋಂದಾಯಿತ ಸ್ವಾಧೀನ ರಹಿತ ಖಾಲಿ ನಿವೇಶನ ಕ್ರಯ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 11 ಎಂದು, ದಿನಾಂಕ 18.03.2014 ರ ನೋಂದಾಯಿತ ಸ್ವಾಧೀನ ರಹಿತ ಕ್ರಯ ಕರಾರು ರದ್ದತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 12 ಎಂದು, ಓಸ್ ನಂಬರ 103/2016 ರ ವಾದ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 13 ಎಂದು, ಓಸ್ ನಂಬರ 103/2016 ರ ರಾಜಿ ಅರ್ಜಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 14 ಎಂದು, ಓಸ್ ನಂಬರ 103/2016 ರ ಡಿಕ್ರಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 15 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ 3 ನೇ ತಕರಾರು ಪಕ್ಷಗಾರರ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.